ಬಗರ್ ಹುಕುಂ ಸಾಗುವಳಿ ಜಮೀನನ್ನು ಖಾಯಂ ಮಾಡುವುದು.

156(275) ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) :— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಬಗರ್ ಹುಕುಂ ಸಾಗುವಳಿ ಜಮೀನನ್ನು ಖಾಯಂ ಮಾಡುವಂತೆ ಕೋರಿ ಬಂದಿರುವ ಅರ್ಜಿಗಳ ಒಟ್ಟು ಸಂಖ್ಯೆ ಎಷ್ಟು ;

ಆ) ಕಳೆದ 4 ವರ್ಷಗಳಿಂದ ಎಷ್ಟು ಭೂಮಿಯನ್ನು ಸಾಗುವಳಿದಾರರಿಗೆ ವಿತರಿಸಲಾಗಿದೆ; (ವರ್ಷವಾರು)

ಇ) ಸಕ್ರಮಗೊಳಿಸುವಂತೆ ಅರ್ಜಿ ಸಲ್ಲಿಸದೇ ಇರುವವರ ಸಂಖ್ಯೆ ಎಷ್ಟು; (ಜಿಲ್ಲಾವಾರು)

ಈ) ಅರ್ಜಿ ಸಲ್ಲಿಸದೇ ಇರುವವರಿಗೆ ಸಕ್ರಮ ಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :—

ಅ) 10,89,340

ಆ) ವರ್ಷವಾರು ವಿವರ ಕೆಳಗಿನಂತಿದೆ

ವರ್ಷ	ವಿತರಿಸಲಾಗಿರುವ ವಿಸ್ತೀರ್ಣ (ಎಕರೆಗಳಲ್ಲಿ)
1995-96	3,85,303
1996-97	4,58,839
1997-98	8,02,737
1998-99 (ಡಿಸೆಂಬರ್ 98ರ ಅಂತ್ಯಕ್ಕೆ)	3,69,973
ಒಟ್ಟು	20,16,852

ಇ) ಈ) ಸರ್ಕಾರವು ಈ ಹಿಂದೆ ನಿಗಧಿಪಡಿಸಿದ್ದ ದಿನಾಂಕ 19-9-91ರೊಳಗೆ ಅರ್ಜಿ ಸಲ್ಲಿಸದಿದ್ದ ಅನಧಿಕೃತ ಸಾಗುವಳಿದಾರರಿಗೆ 30-4-99 ದಿನಾಂಕದವರೆಗೆ ಅರ್ಜಿ ಸಲ್ಲಿಸಲು 1964ರ ಕರ್ನಾಟಕ ಭೂ ಕಂದಾಯ ಅಧಿನಿಯಮ ಹಾಗೂ 1966ರ ಕರ್ನಾಟಕ ಭೂ ಕಂದಾಯ ನಿಯಮಗಳಲ್ಲಿ ಅವಕಾಶ ಕಲ್ಪಿಸಿದೆ. ಇದರ ಅನುಸಾರ ಸ್ವೀಕರಿಸಬಹುದಾದ ಅರ್ಜಿಗಳನ್ನು ನಿರೀಕ್ಷಿಸಲಾಗುತ್ತಿದ್ದು 30-4-99ರವರೆಗೆ ಸ್ವೀಕರಿಸಬಹುದಾದಂತ ಅರ್ಜಿಗಳ ಸಂಖ್ಯೆಯ ವಿವರಗಳನ್ನು ಈ ಹಂತದಲ್ಲಿ ನೀಡಲು ಬರುವುದಿಲ್ಲ.